**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 29.07.2021.

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 230/2021 ಕಲಂ: 87 ಕೆ ಪಿ ಆ್ಯಕ್ಟ್**

ದಿನಾಂಕ: 27.07.2021 ರಂದು 22:30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ಮಾರುತಿ ತಾಯಪ್ಪ ಬರಕಡೆ ಸಾ॥ ಸಿದ್ದಾಪುರ 2] ವಿಷ್ಣು ಗೋಪಾಲ ಲೋಕಂಡೆ ಸಾ॥ ಕೊಂತೆವ್ವನ ಬಬಲಾದಿ ಕರಾಡದೊಡ್ಡಿ ತಾ:ಜತ್ತ ಜಿ:ಸಾಂಗಲಿ 3] ರಾಜೇಶ ಹಣಮಂತ ಕಲ್ಲೊಳ್ಳಿ ಸಾ॥ ಭಾವಸಾರ ನಗರ ವಿಜಯಪುರ 4] ನಂದಕುಮಾರ ಭೀವಾ ಖರೆ ಸಾ॥ ಕೊಂತೆವ್ವನ ಬಬಲಾದಿ ತಾ:ಜತ್ತ ಜಿ:ಸಾಂಗಲಿ 5] ಪೋಪಟ ಮಾಳಪ್ಪ ಸಲಗರ ಸಾ॥ ಕೊಂತೆವ್ವನ ಬಬಲಾದಿ ತಾ:ಜತ್ತ ಜಿ:ಸಾಂಗಲಿ 6] ಮಂಜುನಾಥ ಲಕ್ಷ್ಮಣ ಚವ್ಹಾಣ ಸಾ॥ ಸಿದ್ದಾಪೂರ 7] ಧರ್ಮಾ ಬೀವಾ ಬೀಸೆ ಸಾ॥ ಸಿದ್ದಾಪುರ 8] ಅಮಸಿದ್ದ ಅಬಾ ಬರಕಡೆ ಸಾ॥ ಸಿದ್ದಾಪುರ 9] ಪಾಟಲು ನೇರುತಿ ಖರೆ ಸಾ॥ ಕೊಂತೆವ್ವನ ಬಬಲಾದಿ ತಾ:ಜತ್ತ ಜಿ:ಸಾಂಗಲಿ ಇವರು ಸಿದ್ದಾಪೂರ ಗ್ರಾಮದ ಹದ್ದಿ ಪಾಟೀಲ ವಸ್ತಿ ಹತ್ತಿರ ಸಾರ್ವಜನಿಕ ಹಳ್ಳದಲ್ಲಿ ಕುಳಿತು ತಮ್ಮ ತಮ್ಮ ಫಾಯ್ದೇಗೋಸ್ಕರ ಇಸ್ಪೇಟ ಎಲೆಗಳ ಮೇಲೆ ಹಣವನ್ನು ಬೆಟ್ಟ ಕಟ್ಟಿ ಅಂದರ-ಬಾಹರ ಅಂಬುವ ಇಸ್ಪೆಟ ಮನ್ನಾ ಜೂಜಾಟ ಆಡುತ್ತಿದ್ದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: 1) ರೋಖ ಹಣ-9250/-, 2) 52 ಇಸ್ಪೇಟ ಎಲೆಗಳು ಕಿ॥ 00=00 ಈ ಬಗ್ಗೆ ಸ:ತ: ಜಿ ಎಸ್ ಉಪ್ಪಾರ ಪಿಎಸ್ಐ ರೂರಲ್ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 28.07.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 231/2021 ಕಲಂ: ಮಹಿಳೆ ಕಾಣೆ.**

ದಿನಾಂಕ 23.07.2021 ರಂದು 12.30 ಗಂಟೆ ಸುಮಾರಿಗೆ ಇದರಲ್ಲಿ ಕಾಣೆಯಾದ ಕವಿತಾ ಗಂ ಬೀಮರಾಯ ಗುಂಜಟಗಿ ವಯಾ 24 ವರ್ಷ ಹಾಗೂ ಅವಳ ಮಗ ಸಿದ್ದಾರ್ಥ ತಂ ಬೀಮರಾಯ ಗುಂಜಟಗಿ ವಯಾ 7 ತಿಂಗಳು ಸಾ॥ ಬೋಳೆಗಾಂವ ತಾ॥ ಇಂಡಿ ಇವಳು ತನ್ನ 7 ತಿಂಗಳ ಮಗ ಸಿದ್ದಾರ್ಥ ಇವನಿಗೆ ಕರೆದುಕೊಂಡು ಹೊನ್ನುಟಗಿಯಿಂದ ಬೋಳೆಗಾಂವಕ್ಕೆ ಹೋಗುವದಾಗಿ ಹೇಳಿ ಹೋದವಳು ತನ್ನ ಮಗುವಿನ ಸಮೇತ ಎಲ್ಲಿಯೋ ಹೋಗಿ ಕಾಣೆಯಾಗಿದ್ದು ಇರುತ್ತದೆ ಈ ಬಗ್ಗೆ ದುಂಡಪ್ಪ ಬಸಪ್ಪ ಕಡಕಭಾವಿ ಸಾ॥ ಹೊನ್ನುಟಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 28.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 132/2021 ಕಲಂ: 78[3] ಕೆ ಪಿ ಆ್ಯಕ್ಟ್**

ದಿನಾಂಕ 28.07.2021 ರಂದು 16.20 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿರಾದ 1] ಈರಣ್ಣ ಮಹಾದೇವಪ್ಪ ತೇಲಿ 2] ಮಹಾವೀರ ಜಿನ್ನಪ್ಪ ಮಳ್ಳಿ ಸಾ॥ ಇಬ್ಬರೂ ಶಿರಶ್ಯಾಡ ಇವರು ತಮ್ಮ ಫಾಯ್ದೆಗೋಸ್ಕರ ಶಿರಶ್ಯಾಡ ಗ್ರಾಮದ ಬಸ್ಸ್ಯಾಂಡ್ ಹತ್ತಿರ ಇರುವ ಲಕ್ಷ್ಮೀ ಭವನ ಹೊಟೇಲದ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಕುಳಿತು ಸಾರ್ವಜನಿಕರಿಗೆ 1 ರೂಪಾಯಿಗೆ 80 ರೂಪಾಯಿ ಕೊಡುತ್ತೇವೆ. ಓಸಿ ಆಡಲು ಬನ್ನಿರಿ ಅಂತಾ ಕರೆದು ಸಾರ್ವಜನಿಕರಿಂದ ಹಣ ಪಡೆದುಕೊಂಡು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಕಲ್ಯಾಣ ಓ.ಸಿ.ಮಟಕಾ ಅಂಬುವ ಜೂಜಾಟವನ್ನು ಆಡಿಸುತ್ತಿರುವಾಗ ಸಿಕ್ಕಿದ್ದು, ಜಪ್ತ ಮಾಲು: ರೋಖ ಹಣ-4,880/-ರೂಪಾಯಿಗಳು, ಓ.ಸಿ ಅಂಕಿ ಸಂಖ್ಯೆ ಬರೆದ ಚೀಟಿ-ಒಂದು, ಬಾಲಪೆನ್-ಒಂದು. ಈ ಬಗ್ಗೆ ಸ॥ತ॥ ಐ. ಎಮ್. ದುಂಡಸಿ ಪಿ.ಎಸ್.ಐ ಇಂಡಿ ಗ್ರಾಮೀಣ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 28.07,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಕೊಲ್ಹಾರ ಪೊಲೀಸ ಠಾಣೆ ಗುನ್ನಾ. ನಂ: 104/2021 ಕಲಂ: 78(3) ಕೆ.ಪಿ.ಆ್ಯಕ್ಟ**

ದಿನಾಂಕ 27.07.2021 ರಂದು 12.20 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿನಾದ ಮಹಾಂತೇಶ ಮಾನಪ್ಪ ಗುಡಿ ಸಾ: ಕೊಲ್ಹಾರ ಈತನು ಕೊಲ್ಹಾರ ಗ್ರಾಮದ ಬನಶಂಕರಿ ದೇವಿಯ ಗುಡಿಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ನಿಂತುಕೊಂಡು ಬರುಹೋಗುವ ಸಾರ್ವಜನಿಕರಿಗೆ ಕೈ ಮಾಡಿ ಕರೆದು ನಿಮಗೆ 1 ರೂಪಾಯಿಗೆ 80 ರೂಪಾಯಿ ಕೊಡುತ್ತೆನೆ ಓ.ಸಿ ಮಟಕಾ ಆಡಲು ಬರ್ರಿ ಅಂತಾ ಹೇಳಿ ಸಾರ್ವಜನಿಕರಿಂದ ಹಣ ಪಡೆದುಕೊಂಡು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಕಲ್ಯಾಣ ಮಟಕಾ ಅಂಬುವ ಓ.ಸಿ. ಜೂಜಾಟವನ್ನು ಆಡಿಸುತ್ತಿರುವಾಗ ಸಿಕ್ಕ ಅಪರಾಧ. ಈ ಬಗ್ಗೆ ಸ॥ತ॥ ಸಿದ್ದಪ್ಪ. ಡಿ ಯಡಹಳ್ಳಿ ಪಿಎಸ್ಐ ಕೊಲ್ಹಾರ ಪಿಎಸ್. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 28.07,2021 ರಂದು ಕೊಲ್ಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.